ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಮಂಗಳವಾರ, ದಿನಾಂಕ ೨೦ನೇ ಮಾರ್ಚಿ ೧೯೯೦ ಫಾಲ್ಗುಣ ೨೯, ೧೯೧೧ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧–೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದ್ದರು]

ಸಂತಾಪ ಸೂಚನೆ

ಅಧ್ಯಕ್ಷರು.—"ವಿಧಾನ ಸಭೆಯ ಮಾಜಿ ಸದಸ್ಯ ಶ್ರೀ ಹೆಚ್. ವೈ. ಮುಂಬರೆಡ್ಡಿಯವರು ೫ನೇ ಫೆಬ್ರುವರಿ, ೧೯೯೦ ರಂದು ನಿಧನರಾದರೆಂದು ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ. ಶ್ರೀಯುತರು ೧೯೫೬–೫೭ನೇ ಸಾಲಿನಲ್ಲಿ ವಿಧಾನ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ".

ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನ ಆಚರಿಸಿದರು)

ಅಧ್ಯಕ್ಷರು.—ದಿವಂಗತರ ಕುಟುಂಬವರ್ಗದವರಿಗೆ ಈ ಸಭೆ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಕಳುಹಿಸಿಕೊಡಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳ ಮೂಡಿಗೆರೆ ತಾಲ್ಲೂಕಿನಲ್ಲಿರುವ ದರಖಾಸ್ತು ಮಂಜೂರಾತಿ ಬಗ್ಗೆ

೬೫೫ ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಮೂಡಿಗೆರೆ ತಾಲ್ಲೂಕಿನಲ್ಲಿ ದರಖಾಸ್ತು ಜಮೀನು ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು ?

(ಆ) ಅವರಲ್ಲಿ ಹರಿಜನರ ಸಂಖ್ಯೆ ಎಷ್ಟು ?

ಶ್ರೀ ಅಜೀಜ್ ಸೇಠ್ (ಕಂದಾಯ ಸಚಿವರು).—

(ಅ) ೧೯೮೯-೯೦ನೇ ಸಾಲಿನಲ್ಲಿ ೫೧೮ ಅರ್ಜಿದಾರರು, ೧೯೮೯–೯೦ರಲ್ಲಿ ೨೧೮ ಜನ ಅರ್ಜಿದಾರರು.

(ಆ) ೧೯೮೯–೯೦ನೇ ಸಾಲಿನಲ್ಲಿ, ೨೦೯ ಅರ್ಜಿದಾರರು ೧೯೮೯–೯೦ರಲ್ಲಿ ೯೯ ಜನ ಅರ್ಜಿದಾರರು

ಶ್ರೀಮತಿ ಮೋಟಮ್ಮ.—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ತಮ್ಮ ಉತ್ತರದಲ್ಲಿ ಅರ್ಜಿದಾರರ ಸಂಖ್ಯೆಯನ್ನು ಕೊಟ್ಟಿದ್ದಾರೆ ಯಾರಿಗೆ ಭೂಮಿಯನ್ನು ಕೊಟ್ಟಿದ್ದಾರೆ ಎಂದು ತಿಳಿಸಿಲ್ಲ ಒಂದು ವೇಳೆ ಅಲ್ಲಿ ಜಮೀನು ಇಲ್ಲದಿದ್ದರೆ ಸಂಬಂಧಪಟ್ಟವರಿಂದ ಅರ್ಜಿಗಳನ್ನು ಏಕೆ ಸ್ವೀಕಾರ ಮಾಡಿದರು ? ನನಗೆ ಗೊತ್ತಿರುವ ಹಾಗೆ ಆ ಕ್ಷೇತ್ರದಲ್ಲಿ ಸಾಕಷ್ಟು ಜಮೀನು ಇದ್ದರೂ ಸಹ ಹರಿಜನರು ಅರ್ಜಿಗಳನ್ನು ಹಾಕಿರುವುದರಲ್ಲಿ ಒತ್ತುವರಿಯಾಗಿದೆ. ಆದುದರಿಂದ ದಯವಿಟ್ಟು ಒಟ್ಟು ಎಷ್ಟು ಜನ ಹರಿಜನರು ಈ ಬಗ್ಗೆ ಜಮೀನು ಕೋರಿ ಅರ್ಜಿಯನ್ನು ಹಾಕಿದ್ದಾರೆ ? ಅರ್ಜಿ ಕೊಟ್ಟವರಲ್ಲಿ ಎಷ್ಟು ಜನರಿಗೆ ಜಮೀನು ಕೊಟ್ಟಿದ್ದೀರಿ ? ಹಾಗೂ ಉಳಿದವರಿಗೆ ಎಷ್ಟು ಜಮೀನು ಕೊಡಲು ಸಾಧ್ಯ ಎಂಬ ಬಗ್ಗೆ ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಅಜೀಜ್ ಸೇಠ್.—ಮಾನ್ಯ ಸಭಾಧ್ಯಕ್ಷರೆ, ಅರ್ಜಿ ಹಾಕಿದವರ ವಿವರಗಳು ಹೀಗೆ ಇದೆ. ಹರಿಜನರು–೨೦೯, ಗಿರಿಜನರು–೮೭, ಎಕ್ಸ್ ಸರ್ವಿಸ್‌ಮನ್ ೬೨,ರಾಜಕೀಯ ಸಂತ್ರಸ್ತರು–೧ (ಒಂದು) ವರ್ತಾರ್ಜನಲ್ ಫಾರ್ಮರ್ಸ್–೧೦೮ ಮತ್ತು ಇತರರು ೫೧. ಜಮೀನಿಗಾಗಿ ಅರ್ಜಿಗಳನ್ನು ಕೊಡುವವರಿಗೆ ಬೇಡ ಎಂದು ಹೇಳುವ್ದಿಲ್ಲ ಹಾಗಿಲ್ಲ. ಅಂತೆಯೇ ಆ ಕ್ಷೇತ್ರದಲ್ಲಿ ಜಮೀನು ಇಲ್ಲ ಎಂದು ತಿಳಿಸ ಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸಭಾಧ್ಯಕ್ಷರೆ, ಹಿಂದಿನ ಸರಕಾರದವರು ಗೋಮಾಳ ಜಮೀನಿನಲ್ಲಿ ಯಾವ ದರಖಾಸ್ತು ಕೂಡ ಮಂಜೂರು ಮಾಡಬಾರದು ಅದನ್ನು ಕಡಿತ ಮಾಡಬಾರದು ಎಂದು ನಿರ್ಣಯ ಮಾಡಿದ್ದಾರೆ ಆ ಕಾರಣಕ್ಕಾಗಿ ಜಮೀನು ಇದ್ದಾಗಲೂ ಕೂಡ ಅಧಿಕಾರಿಗಳು ಜಮೀನು ಇಲ್ಲವೆಂದು ಹೇಳುತ್ತಿರುತ್ತಾರೆ. ಆದುದರಿಂದ ದಯ ಮಾಡಿ ಹಿಂದಿನ ಸರಕಾರದ ಆಜ್ಞೆಯನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೀರೋ ಹೇಗೆ ಎಂಬ ಬಗ್ಗೆ ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಅಜೀಜ್ ಸೇಠ್.—ನನ್ನ ತಿಳುವಳಿಕೆ ಪ್ರಕಾರ ಗೋಮಾಳದ ಪ್ರಶ್ನೆ ಇಲ್ಲಿ ಇಲ್ಲ. ಈ ಪರ್ಟಿಕುಲರ್ ತಾಲ್ಲೂಕ್‌ನಲ್ಲಿ ಜಮೀನು ಇಲ್ಲ. ಆದರೂ ಈ ಬಗ್ಗೆ ಪುನ: ಪರಿಶೀಲಿಸುತ್ತೇನೆ.

ಹುಬ್ಬಳ್ಳಿ–ಧಾರವಾಡ ನೀರು ಸರಬರಾಜು ಯೋಜನೆಗಾಗಿ ಜಮೀನು ಸ್ವಾಧೀನ

೨೬. ಶ್ರೀ ಕೆ.ಹೆಚ್. ಪಾಟೀಲ್ (ಗದಗ).— ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹುಬ್ಬಳ್ಳಿ ಧಾರವಾಡ ನೀರು ಸರಬರಾಜು ಯೋಜನೆಗಳಿಗೆ ೧೫೪ ಎಕರೆ ಜಮೀನನ್ನು ಭೂಸ್ವಾಧೀನ ಮಾಡಿಕೊಂಡಿರುವುದು ನಿಜವೇ,

ಆ) ಹಾಗಿದ್ದಲ್ಲಿ ಅಷ್ಟು ವಿಸ್ತೀರ್ಣ ಜಮೀನನ್ನು ಸದರಿ ಯೋಜನೆಗೆ ಉಪಯೋಗಿಸಿಕೊಳ್ಳಲಾಗಿದೆಯೇ,

ಇ) ಸದರಿ ಜಮೀನನ್ನು ೭೯ ಜನ ಒತ್ತುವರಿ ಮಾಡಿರುವುದು ನಿಜವೇ,

ಈ) ಹಾಗಿದ್ದಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಅವರನ್ನು ಜಮೀನಿನಿಂದ ಹೊರ ಹಾಕಲು ಆದೇಶಿಸಿದ್ದಾರೆಯೇ,

ಉ) ಈಗ ವಿಷಯವು ಯಾವ ಹಂತದಲ್ಲಿದೆ ?

ಶ್ರೀ ಅಜೀಜ್ ಸೇಠ್ (ಕಂದಾಯ ಸಚಿವರು).—

ಅ) ಹಾದು ಕಲಕಟ್ಟಿಗೆ ತಾಲ್ಲೂಕು, ಜಮ್ಮಿಹಾಳ ಗ್ರಾಮದಲ್ಲಿ ೧೯೪೮–೪೯ರಲ್ಲಿ ೧೪೬–೧೮ ಎಕರೆ ಯನ್ನು ಹುಬ್ಬಳ್ಳಿ–ಧಾರವಾಡ ನೀರು ಸರಬರಾಜು ಯೋಜನೆಗಾಗಿ ಭೂಸ್ವಾಧೀನ ಮಾಡಲಾಗಿದೆ.

ಆ) ೪೦ ಎಕರೆ ಜಮೀನನ್ನು ಮಾತ್ರ ಸದರಿ ಯೋಜನೆಗೆ ಉಪಯೋಗಿಸಿಕೊಳ್ಳಲಾಗಿದೆ.

ಇ) ಹೌದು

ಈ) ಜಮೀನನ್ನು ಒತ್ತುವರಿ ಮಾಡಿರುವವರಿಗೆ ತಹಸೀಲ್ದಾರ್ ನೋಟೀಸ್‌ಗಳನ್ನು ಜಾರಿ ಮಾಡಿರುತ್ತಾರೆ.

ಧಾರವಾಡ ಸಹಾಯಕ ಆಯುಕ್ತರು ಅವರನ್ನು ಜಮೀನಿನಿಂದ ಹೊರ ಹಾಕುವ ಬಗ್ಗೆ ತಡೆಯಾಜ್ಞೆ ನೀಡಿರುತ್ತಾರೆ ಈ ಮಧ್ಯೆ ಕೆಲವರು ಜಮೀನನ್ನು ಒತ್ತುವರಿ ಮಾಡಿರುವವರಿಗೆ ಜಮೀನನ್ನು ಸಕ್ರಮಣ ಮಾಡಬಾರದೆಂದು ಮತ್ತು ಸದರಿ ಜಮೀನನ್ನು ಯಾರಿಗೂ ವಿಲೇವಾರಿ ಮಾಡದಂತೆ ಉಚ್ಚ ನ್ಯಾಯಾಲಯದಿಂದ ಆದೇಶವನ್ನು ಪಡೆದಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಮಂತ್ರಿಮಹೋದಯರು ನಡೆದಿರುವ ಘಟನೆಯನ್ನು ಒಪ್ಪಿ ಕೊಂಡಿದ್ದು ನಿಜವಾಗಿಯೂ ಸ್ವಾಗತ ಪಡುವಂಥಾದ್ದು. ೧೪೬ ಎಕರೆಯನ್ನು ಅಕ್ವೈರ್ ಮಾಡಿದ ನಂತರ ಸದರಿ ಜಮೀನನ್ನು ಬೇರೆ ಉದ್ದೇಶಕ್ಕೆ ಉಪಯೋಗ ಮಾಡಬಾರದೆಂದು ಇದ್ದರೂ ಸಹ ೭೯ ಜನರು ಅದನ್ನು ಒತ್ತುವರಿ ಮಾಡಿದ ಮೇಲೆ ಮತ್ತು ಅಸಿಸ್ಟೆಂಟ್ ಕಮಿಷನರ್‌ರವರು ಅದಕ್ಕೆ ತಡೆಯಾಜ್ಞೆ ಕೊಟ್ಟಮೇಲೆ ಏನೇನೆಲ್ಲ ವಿಚಾರಣೆ ನಡೆಸಲಾಗಿದೆಯೇ ? ಆ ೭೯ ಜನರು ಯಾರೆಲ್ಲ ಎಂಬುದನ್ನು ತಿಳಿಸುತ್ತೀರಾ ?